O.S. No.78/2015
DW-01

ದಿನಾಂಕ:21-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ: ಶ್ರೀ.ಯು.ಸಿ.ಡಬ್ಲೂ. ವಕೀಲರಿಂದಃ**

1. ವಾದಿಯು ನನ್ನ ಸಂಬಂಧಿಕರಾಗಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು, 1 ನೇ ಪ್ರತಿವಾದಿ ಹಾಗೂ ಈರಮ್ಮ ರವರು ಕೂಡಿಕೊಂಡು ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿ. ಸದರಿ ದಾವೆಯು ಇನ್ನೂ ಚಾಲ್ತಿಯಲ್ಲಿರುತ್ತದೆ. ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಕೇವಲ ಸರ್ವೆ ನಂ.52 ಕ್ಕೆ ಸಂಬಂದಪಟ್ಟಂತೆ ದಾವೆಯನ್ನು ಹೂಡಿರುತ್ತೇವೆ. ಸರ್ವೆ ನಂಃ52 ರ ಒಟ್ಟು ವಿಸ್ತೀರ್ಣ ಹೇಳಲು ಬರುವುದಿಲ್ಲ. ಸರ್ವೆ ನಂಃ52 ರಲ್ಲಿ ಒಟ್ಟು ಎಷ್ಟು ಹಿಸ್ಸೆಗಳು ಇರುತ್ತವೆ ಎಂದರೆ ಗೊತ್ತಿರುವುದಿಲ್ಲ.

2. ಸರ್ವೆ ನಂಃ52 ರಲ್ಲಿ ಎಷ್ಟು ಜನರ ಮಾಲೀಕತ್ವದ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ನನ್ನ ಹಕ್ಕಿನ ಮಾತ್ರ ಹೇಳಬಹುದು ಎನ್ನುತ್ತಾರೆ. ಸರ್ವೆ ನಂಃ52 ಇದು ಹಳೆಯ ಸರ್ವೆ ನಂಬರಾಗಿರುತ್ತದೆ. ಇದೇ ಹಳೆಯ ಸರ್ವೆ ನಂಬರ ಮುಂದುವರಿದು ಎರಡು ಸರ್ವೆ ನಂಬರಗಳಾಗಿರುತ್ತವೆ ಎಂದರೆ ಸರಿ, ಹೊಸ ಸರ್ವೆ ನಂಬರಗಳು ಅದರ ಸಂಃ27 ಹಾಗೂ 28 ಎಂದರೆ ಸರಿ. ಸರ್ವೆ ನಂಃ27 ರ ವಿಸ್ತೀರ್ಣ 13-ಎಕರೆ 20-ಗುಂಟೆ ಹಾಗೂ ಸರ್ವೆ ನಂಃ28 ರ ವಿಸ್ತೀರ್ಣ 23-ಎಕರೆ 28-ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ಸರ್ವೆ ನಂಬರ.52 ರ ಒಟ್ಟು ವಿಸ್ತೀರ್ಣ 37-ಎಕರೆ 8-ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಸರ್ವೆ ನಂಃ28/1 ರಲ್ಲಿ ವಿಸ್ತೀರ್ಣ 5-ಎಕರೆ 33-ಗುಂಟೆ ಇದ್ದು, ಸದರಿ ಜಮೀನು ಬಂಡೆಪ್ಪ ಹಾಗೂ ಕಂಟೆಪ್ಪ ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂಃ28/2, 1-ಎಕರೆ 38-ಗುಂಟೆ ಜಮೀನು ಸಂಗಪ್ಪ ತಂ.ಚನ್ನಪ್ಪ ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂಃ28/3, 2-ಎಕರೆ ಇದ್ದು ಸದರಿ ಜಮೀನು ಅಣ್ಣೆಪ್ಪ ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂಃ28/4, ವಿಸ್ತೀರ್ಣ 1-ಎಕರೆ 3-ಗುಂಟೆ ಜಮೀನು ಶಿವುಲಿಂಗಪ್ಪ ತಂ. ಸಂಗಪ್ಪ ರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಮೊದಲು ಸದರಿ ಶಿವುಲಿಂಗಪ್ಪ ರವರಿಗೆ ಸೇರಿದ್ದು ಈಗ ನಮ್ಮದು ಇರುತ್ತದೆ ಎನ್ನುತ್ತಾರೆ.

4. ಸದರಿ 1-ಎಕರೆ 3-ಗುಂಟೆ ಜಮೀನು ನಾನು ಖರೀದಿ ಮಾಡಿರುತ್ತೇನೆ. ಖರೀದಿ ಯಾವ ರೀತಿ ಮಾಡಿದ್ದಿರಿ ಎಂದರೆ ಸಾಕ್ಷಿಯು ರಜೀಸ್ಟ್ರಿ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ. ಸದರಿ ರಜೀಸ್ಟ್ರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಸಲ್ಲಿಸಿದ್ದೇನೆ ಎನ್ನುತ್ತಾರೆ. ಸದರಿ ಸರ್ವೆ ನಂಃ28/4 ರಲ್ಲಿ 1-ಎಕರೆ 3-ಗುಂಟೆ ಜಮೀನನ್ನು ಶಿವುಲಿಂಗಪ್ಪ ರವರಿಂದ ನಾನು ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂಃ28/5, 28-ಗುಂಟೆ ಜಮೀನು ನನ್ನದು ಇರುತ್ತದೆ ಎಂದರೆ ಸರಿ. ಸರ್ವೆ ನಂಃ28/6 8-ಎಕರೆ 3-ಗುಂಟೆ ಜಮೀನು ಸಂಗಪ್ಪ ತಂ.ಚನ್ನಪ್ಪ ರವರಿಗೆ ಸೇರಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಃ28/7 ರಲ್ಲಿ ವಿಸ್ತೀರ್ಣ 1-ಎಕರೆ 38-ಗುಂಟೆ ದಾವಾ ಜಮೀನಾಗಿದ್ದು ವಾದಿಗೆ ಸೇರಿದ್ದು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಜಮೀನು ನನಗೆ ಸೇರಿದ್ದು ಇರುತ್ತದೆ ಎನ್ನುತ್ತಾರೆ.

5. ಸರ್ವೆ ನಂಃ28/7, 1-ಎಕರೆ 38-ಗುಂಟೆ ಜಮೀನಿಗೆ ಸಂಬಂಧಿಸಿದಂತೆ 1963 ನೇ ಇಸ್ವಿಯ ತನಕ ವಾದಿಯ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ವಾದಿಯ ತಂದೆಯ ಹೆಸರು ಅಣ್ಣೆಪ್ಪ ತಂ.ಗುರುಪಾದಪ್ಪ ಧೂಳೆ ಎಂದರೆ ಸರಿ. ಸಾಕ್ಷಿಗೆ ನಿ.ಪಿ.1 ನ್ನು ತೋರಿಸಲಾಗಿ ನಿ.ಪಿ.1 ರಲ್ಲಿ ಹಿಸ್ಸೆದಾರ ಕಾಲಂನಲ್ಲಿ ಅಣ್ಣೆಪ್ಪ ತಂ.ಗುರುಪಾದಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನಮೂದು ಇರುತ್ತದೆ ಎನ್ನುತ್ತಾರೆ. ಭೂಮಾಪನ ಇಲಾಖೆಯವರು ದಾಖಲೆಗಳನ್ನು ಹಾಗೂ ಕಬ್ಜೆಯನ್ನು ನೋಡಿಯೇ ಫಾರ್ಮ ನಂ.10 ನ್ನು ತಯಾರಿಸುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

6. ಶಿವುರಾಯ ತಂ. ಮಾದಪ್ಪ ನನ್ನ ಅಜ್ಜನಾಗಬೇಕು. ನಿ.ಪಿ.2 ನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ನಿ.ಪಿ.2 ರಲ್ಲಿ ಯಾರ ಪಾಲಿಗೆ ಎಷ್ಟು ಹಿಸ್ಸೆ ಇರುತ್ತದೆ ಎಂದು ಸದರಿ ದಾಖಲೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ನಿ.ಪಿ.2 ರಲ್ಲಿ ಹಿಸ್ಸೆ ಕ್ರಮಾಂಕ 5 ರಲ್ಲಿ 28-ಗುಂಟೆ ವಿಸ್ತೀರ್ಣ ಶಿವುರಾಯ ತಂ. ಮಾದಪ್ಪ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಶಿವುರಾಯ ತಂ. ಮಾದಪ್ಪ ನನ್ನ ಅಜ್ಜನಾಗಿರುತ್ತಾರೆ ಎಂದರೆ ಸರಿ. ನಿ.ಪಿ.2 ರಲ್ಲಿ ನಮೂದಿಸಿದಂತೆ ಸರ್ವೆ ನಂಃ28 ರಲ್ಲಿ ನನ್ನ ಅಜ್ಜನ ಪಾಲಿಗೆ ಕೇವಲ 28-ಗುಂಟೆ ಜಮೀನು ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಇನ್ನೂ ಹೆಚ್ಚಿನ ಜಮೀನು ಇನ್ನೊಂದು ಸರ್ವೆ ನಂಬರದಲ್ಲಿ ಇರುತ್ತದೆ ಎನ್ನುತ್ತಾರೆ.

7. ಸಾಕ್ಷಿಗೆ ನಿ.ಪಿ.2 ನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ನನ್ನ ಅಜ್ಜನ ಪಾಲಿಗೆ ಎಷ್ಟು ಗುಂಟೆ ಜಮೀನು ನಮೂದಾಗಿರುತ್ತದೆ ಎಂದು ಹೇಳಲು ಬರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೇಳಲು ಬರುವುದಿಲ್ಲ ಎನ್ನುತ್ತಾರೆ. ನಾನು ಪಿ.ಯು.ಸಿ. ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಿ.ಪಿ.2 ರಲ್ಲಿ ಶಿವುರಾಯ

ತಂ.ಮಾದಪ್ಪ  ಎಂದು ಹೆಸರು ಯಾವ ಕಾಲಂನಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು 5 ನೇ ಕಾಲಂನಲ್ಲಿ ನಮೂದಾಗಿರುತ್ತದೆ ಎನ್ನುತ್ತಾರೆ.  ಒಂದೇ ಕಾಲಂನಲ್ಲಿ ನಮೂದಾಗಿರುತ್ತದೆ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸರಿ ಇದೆ

ಸಹಿ/-

ಹೆಚ್ಚುವರಿ  ದಿವಾಣಿ ನ್ಯಾಯಾಧೀಶರು

ಭಾಲ್ಕಿ